**ರಾಜ್ಯ ಅರಣ್ಯ ಇಲಾಖೆಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅನುಷ್ಠಾನಗೊಳಸುತ್ತಿರುವ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಎಸ್‌ಡಬ್ಲ್ಯೂಡಿ 21 ಎಸ್‌ಎಲ್‌ಪಿ 2006, ದಿನಾಂಕ 11-10-2006ರಂದು ನೀಡಲಾದ ನಿರ್ದೇಶನದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ "Consolidating the existing guidelines for formulating implementation and monitoring of Special Component Plan for the Scheduled castes & Tribal Sub-Plan for Scheduled Tribes" ಇವರ ಪ್ರಕಾರ ಯೋಜನೆಗಳನ್ನು ಅರಣ್ಯ ಇಲಾಖೆಯಲ್ಲಿ ಅನುಷ್ಠಾನಗೊಳಸಲಾಗುತ್ತಿತ್ತು. ಈ ಯೋಜನೆಗಳ ಉದ್ದೇಶಗಳು ಕೆಳಕಂಡಂತಿವೆ.

- Substantial reduction in poverty and un-emploment.
- Creation of productive assets in favour of Scheduled Castes and Scheduled Tribes to sustain the growth likely to accrue through development efforts.
- Human resource development of the Scheduled Castes and Scheduled Tribes by providing adequate seducational and health services, and
- Provision of physical and financial security against all types of exploitation and oppression.
- ಈ ಯೋಜನೆಗಳಡಿ ಒದಗಿಸಲಾದ ಅನುದಾನವನ್ನು ವರ್ಗಾಯಿಸಲು ಅಥವಾ ವ್ಯಪಗತ ಮಾಡಲು ಅವಕಾಶವಿರುವುದಿಲ್ಲ.
- ಈ ಯೋಜನೆಗಳಡಿ ಸೌಲಭ್ಯಗಳನ್ನು ನೇರವಾಗಿ ಪರಿಶಿಷ್ಟ ಜಾತಿ / ಪಂಗಡದ ಜನಾಂಗದ ಕುಟುಂಬ/ ಫಲಾನುಭವಿಗಳಿಗೆ ಒಸಗಿಸಬೇಕಾಗುತ್ತದೆ.
- Outlay for area oriented scheme directly benefiting scheduled castes hamlets / villages having a majority of scheduled castes population / tribal hamlets and villages may be included in SCP and TSP.

ಈ ಮಾರ್ಗಸೂಚಿಗಳ ಪ್ರಕಾರ ಅರಣ್ಯ ಇಲಾಖೆಯಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಸುವ ಸಂದರ್ಭಗಳಲ್ಲಿ ಅರಣ್ಯ ಹಾಗೂ ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪಂಗಡದ ಕುಟುಂಬಗಳಿಗೆ ಸೋಲಾರ್ ಲ್ಯಾಂಪ್ಸ್, ಸರಳ ಒಲೆ, ಸಾಮಾಜಿಕ ಭದ್ರತಾ ನೆಡುತೋಪು, ಉಚಿತ ಬಿದಿರು ಮತ್ತು ಎಲ್.ಪಿ.ಜಿ ಸಂಪರ್ಕ ಒದಗಿಸಲಾಗಿದೆ.

2. ಸಮಾಜ ಕಲ್ಯಾಣ ಇಲಾಖೆಯಿಂದ ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಕಇ 75 ಎಸ್‌ಎಲ್‌ಪಿ 2014, ದಿನಾಂಕ 20-03-2014ರಂದು "ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳು ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013ರಲ್ಲಿ ಪ್ರಕಟಿಸಿದ್ದು, ಸದರಿ ಅಧಿನಿಯಮಗಳ ಪ್ರಕಾರ ಎಸ್‌ಸಿಪಿ & ಟಿಎಸ್‌ಪಿ ಯೋಜನೆಗಳನ್ನು ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ನಿಯಮಗಳ ಮಾರ್ಗಸೂಚಿಗಳ ಪ್ರಕಾರ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಅನುಸೂಚಿತ ಜಾತಿ ಉಪಯೋಜನೆ, ಬುಡಕಟ್ಟು ಉಪಯೋಜನೆಯಡಿಯಲ್ಲಿ ಹಂಚಿಕೆ ಮಾಡುವ ಅನುದಾನವನ್ನು ವ್ಯಪಗತವಾಗದಂತೆ ಸದರಿ ಜನಾಂಗದ ಉಪಯೋಗಕ್ಕೆ ಯೋಜನೆಗಳನ್ನು ರೂಪಿಸಿ ಅದರಂತೆ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನಿಂದ ಅನುಮೋದನೆಗೊಂಡ ನಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ, ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪಂಗಡದ ಫಲಾನುಭವಿಗಳ ಪಟ್ಟಿಗೆ ಚುನಾಯಿತ ಪ್ರತಿನಿಧಿಗಳಿಂದ ಅನುಮೋದನೆ ಪಡೆದು ಅವರುಗಳಿಗೆ ಕಳೆದ 5 ವರ್ಷಗಳಿಂದ, ಅರಣ್ಯದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಎಲ್.ಪಿ.ಜಿ ಸಂಪರ್ಕ, ಸೋಲಾರ್ ಲ್ಯಾಂಪ್, ಸೋಲಾರ್ ವಾಟರ್ ಹೀಟರ್, ಸರಳ ಒಲೆ, ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆ, ಜೇನು ಸಾಕಾಣಿಕಾ ತರಬೇತಿ, ಬಿದಿರು ವಿತರಣೆ, ಮಾಡಿದುವುದಲ್ಲದೆ ರಸ್ತೆ ಬದಿ ನೆಡುತೋಪು ನಿರ್ವಹಣೆಯಡಿ ಪರಿಶಿಷ್ಟ ಜಾತಿ / ಪಂಗಡದ ಕಾಲೋನಿಗಳಲ್ಲಿ ಮರಗಳನ್ನು ನೆಟ್ಟು ನಿರ್ವಹಣೆ ಮಾಡುವುದರಿಂದ ನೆರಳನ್ನು ಉಂಟು ಮಾಡುವುದಲ್ಲದೇ ನೈಸರ್ಗಿಕ ಸೌಂದರ್ಯವನ್ನು ಸೊಬಗನ್ನು ನೀಡುತ್ತದೆ ಹಾಗೂ ಹಣ್ಣು, ಉರವಲು ಮತ್ತು ಮೇವು ಹಂಚಿಕೆಗೆ ಸಹಾಯವಾಗುವುದಲ್ಲದೆ ಪರಿಸರವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

3. ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಸ್‌ಡಬ್ಲ್ಯೂಡಿ 167 ಎಸ್‌ಎಲ್‌ಪಿ 2017(ಪಿ), ಬೆಂಗಳೂರು ದಿನಾಂಕ 08-11-2017ರಲ್ಲಿ ಕರ್ನಾಟಕ ಸರ್ಕಾರವು ರಚಿಸಿರುವ ಕರ್ನಾಟಕ ಅನುಸೂಚಿತ ಜಾತಿ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ನಿಯಮಗಳು, 2017ರ ಪ್ರಕಾರ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ನಿಯಮಗಳ ಮಾರ್ಗಸೂಚಿಗಳ ಪ್ರಕಾರ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಅನುಸೂಚಿತ ಜಾತಿ ಉಪಯೋಜನೆ, ಬುಡಕಟ್ಟು ಉಪಯೋಜನೆಯಡಿಯಲ್ಲಿ ಹಂಚಿಕೆ ಮಾಡುವ ಅನುದಾನವನ್ನು ವ್ಯಪಗತವಾಗದಂತೆ ಸದರಿ ಜನಾಂಗದ ಉಪಯೋಗಕ್ಕೆ ಯೋಜನೆಗಳನ್ನು ರೂಪಿಸಿ ಅದರಂತೆ ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ರಾಜ್ಯ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿನಿಂದ ಅನುಮೋದನೆಗೊಂಡ ನಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ, ಅರಣ್ಯ ಮತ್ತು ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪಂಗಡದ ಫಲಾನುಭವಿಗಳ ಪಟ್ಟಿಗೆ ಚುನಾಯಿತ ಪ್ರತಿನಿಧಿಗಳಿಂದ ಅನುಮೋದನೆ ಪಡೆದು ಅವರುಗಳಿಗೆ ಅರಣ್ಯದ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಎಲ್.ಪಿ.ಜಿ ಸಂಪರ್ಕ,

ಸಿಲಿಂಡರ್ ಭರ್ತಿ ಮಾಡಿಕೊಡುವುದು, ಸೋಲಾರ್ ಲ್ಯಾಂಪ್, ಸೋಲಾರ್ ವಾಟರ್ ಹೀಟರ್, ಜೇನು ಸಾಕಾಣಿಕೆ ಪೆಟ್ಟಿಗೆ ವಿತರಣೆ, ಜೇನು ಸಾಕಾಣಿಕಾ ತರಬೇತಿ, ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣೆ ಬಗ್ಗೆ ತರಬೇತಿ, ಮೊಬೈಲ್ ಮೂಲಕ ಸಿಲಿಂಡರ್ ಬುಕ್ಕಿಂಗ್ ಮಾಡುವ ಬಗ್ಗೆ ತರಭೇತಿ, ಬಿದಿರು ಕರಕುಶಲ ವಸ್ತುಗಳ ತಯಾರಿಕೆ ಬಗ್ಗೆ ತರಬೇತಿ, ಬಿದಿರು ವಿತರಣೆ, ಮಾಡುವುದಲ್ಲದೆ ರಸ್ತೆ ಬದಿ ನೆಡುತೋಪುಗಳ ನಿರ್ವಹಣೆಯಡಿ ಪರಿಶಿಷ್ಟ ಜಾತಿ / ಪಂಗಡದ ಕಾಲೋನಿಗಳಲ್ಲಿ ಬೆಳೆಸಲಾದ ನೆಡುತೋಪುಗಳನ್ನು ನಿರ್ವಹಣೆ ಮಾಡುವುದರಿಂಧ ನೆರಳನ್ನು ಉಂಟು ಮಾಡುವುದಲ್ಲದೇ ನೈಸರ್ಗಿಕ ಸೌಂದರ್ಯವನ್ನು ಸೊಬಗನ್ನು ನೀಡುತ್ತದೆ ಹಾಗೂ ಹಣ್ಣು, ಉರವಲು ಮತ್ತು ಮೇವು ಹಂಚಿಕೆಗೆ ಸಹಾಯವಾಗುವುದಲ್ಲದೆ ಪರಿಸರವನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಅವರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.